ವಸತಿ ನಿಲಯ ವಹಿವಾಟು

397(980); ಶ್ರೀ ಅನಿಲ್ ಲಾಡ್ (ಬಳ್ಳಾರಿ ನಗರ)

ಅ) ಕಳೆದ ಮೂರು ವರ್ಷಗಳಿಂದ ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಸುತ್ತಿರುವ ಹಾಸ್ಟೆಲ್‌ಗಳಲ್ಲಿ ಖರೀದಿಸಿದ ಆಹಾರ ಪದಾರ್ಥಗಳು ಮತ್ತು ಸಾಮಗ್ರಿಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ;

ಆ) ಈ ಹಾಸ್ಟೆಲ್‌ಗಳಿಗಾಗಿ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು ಮತ್ತು ಖರ್ಚಾದ ಅನುದಾನವೆಷ್ಟು;

ಇ) ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಿರುವ ಟೆಂಡರ್‌ದಾರರು ಯಾರು; (ವಿವರ ನೀಡುವುದು);

ಈ) ಹಾಸ್ಟೆಲ್‌ಗಳಲ್ಲಿನ ದುರವಸ್ಥೆ ಬಗ್ಗೆ ಎಷ್ಟು ದೂರುಗಳು ಬಂದಿವೆ; ಅವುಗಳನ್ನು ಸರಿಪಡಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು) ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಸುತ್ತಿರುವ ಹಾಸ್ಟೆಲ್‌ಗಳಲ್ಲಿ ಕಳೆದ ಮೂರು ವರ್ಷಗಳಿಂದ ಖರೀದಿಸಿದ ಆಹಾರ ಪದಾರ್ಥಗಳು ಮತ್ತು ಸಾಮಗ್ರಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ರೂ.431.53 ಲಕ್ಷಗಳು ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಿಂದ ರೂ.117.51 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಈ ಹಾಸ್ಟೆಲ್‌ಗಳಿಗಾಗಿ ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮತ್ತು ಖರ್ಚಾದ ಅನುದಾನದ ವಿವರಗಳು ಈ ಕೆಳಕಂಡಂತಿದೆ.

ಕ್ರ ಸಂ	ವರ್ಷ	ಸಮಾಜ ಕಲ್ಯಾಣ ಇಲಾಖೆ		ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ	
		ಬಿಡುಗಡೆಯಾದ ಅನುದಾನದ	ಖರ್ಚಾದ ಅನುದಾನ	ಬಿಡುಗಡೆಯಾದ ಅನುದಾನದ	ಖರ್ಚಾದ ಅನುದಾನ
1	2011–12	135.88	135.88	33.48	33.48
2	2012–13	146.80	146.80	34.23	34.23
3	2013–14	148.85	148.85	49.80	49.80

ಇ) ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಿರುವ ಟೆಂಡರ್‌ದಾರರ ವಿವರಗಳು ಈ ಕೆಳಕಂಡಂತಿದೆ:

(1) ಕರ್ನಾಟಕ ಸ್ಟೇಟ್ ಕೋ–ಅಪ್ ರೆಟೀವ್ ಕನ್ಸ್ಯೂಮರ್ ಫೆಡರೇಷನ್ ಲಿಮಿಟೆಡ್, ಬೆಂಗಳೂರು.

(2) ಹಾಪ್ ಕಾಮ್ಸ್, ಬಳ್ಳಾರಿ.

ಈ) ವಿದ್ಯಾರ್ಥಿ ನಿಲಯಗಳ ದುರವಸ್ಥೆ ಬಗ್ಗೆ ಯಾವುದೇ ಲಿಖಿತ ದೂರುಗಳು ಬಂದಿರುವುದಿಲ್ಲ.

ಬಿ.ಪಿ.ಎಲ್. ಮತ್ತು ಎ.ಪಿ.ಎಲ್. ಪಡಿತರ ಚೀಟಿಗಳು

398(981); ಶ್ರೀ ಅನಿಲ್ ಲಾಡ್ (ಬಳ್ಳಾರಿ ನಗರ)

ಅ) ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2014ರವರೆಗೆ ಹಂಚಿಕೆ ಯಾಗಿರುವ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಪಡಿತರ ಚೀಟಿಗಳು ಎಷ್ಟು;

ಆ) ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಪಡಿತರ ಚೀಟಿಗಳಿಗಾಗಿ ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾದ ವಿವರ ನೀಡುವುದು);